ನಾವು ಮಾಡಿದ ದುಡುಕುಗಳು ಮುಂದಿನ ಕತೆಯಲ್ಲಿ ಅಂಥ ದುಡುಕುಗಳನ್ನು ತಡೆಯಲು ನೆರವಾಗಬಹುದು. ಕತೆ ಬರೆಯುವುದು ಕೂಡ ಮಗುವೊಂದು ತೆವಳಿ, ದೊಗ್ಗಾಲು ಮಂಡಿಯಲ್ಲಿ ಚಲಿಸಿ, ಎದ್ದು ಬಿದ್ದು ನಡೆಯುವುದನ್ನು ಕಲಿತಂತೆಯೇ. ಆದರೆ ಮಗುವಿನಂತೆ ಕೊನೆಗೊಮ್ಮೆ ಎದ್ದು ನಿಂತ ತಕ್ಷಣ ಕತೆಗಾರನ ಕೆಲಸ ಮುಗಿಯುವುದಿಲ್ಲ! ಏಳುವುದು, ಎಡವುವುದು, ಬೀಳುವುದು, ಮತ್ತೆ ಮೇಲೇಳುವುದು... ಇವೆಲ್ಲ ಕಥಾ ಬರವಣಿಗೆಯಲ್ಲಿ ಮತ್ತೆ ಮತ್ತೆ ನಡೆಯುತ್ತಲೇ ಇರುತ್ತದೆ.

ಇನ್ನು ನಿಮ್ಮ ಪ್ರಶ್ನೆಯ ಎರಡನೆಯ ಭಾಗ ಇತರರ ಕತೆಗಳ ಹಾಗೂ ಇನ್ನಿತರ ಬಗೆಯ ಕೃತಿಗಳ ಓದು ನನ್ನ ಕಥಾಬರವಣಿಗೆಗೆ ಹೇಗೆ ನೆರವಾಗಿದೆ ಎನ್ನುವುದನ್ನು ಕುರಿತಾದದ್ದು ಎಂದು ತಿಳಿಯುವೆ. ನಮ್ಮಲ್ಲಿ ಕತೆ ಬರೆಯುವುದನ್ನು ಶಿಸ್ತುಬದ್ಧವಾಗಿ ಕಲಿಯುವ ಯಾವ ಕೋರ್ಸುಗಳೂ ಇಲ್ಲ. ಮೊನ್ನೆ ನೊಬೆಲ್ ಪ್ರಶಸ್ತಿ ಪಡೆದ ಇಷಿಗುರೊ ಅಂಥದೊಂದು ಕೋರ್ಸ್ ಮಾಡಿದ್ದನಂತೆ. ಇಂಥ ಕೋರ್ಸುಗಳು ಎಷ್ಟು ಉಪಯುಕ್ತವೋ ಗೊತ್ತಿಲ್ಲ. ಆದರೆ ಯಾವುದೇ ಬರೆಯುವ ಲೇಖಕನಿಗೆ ಲೋಕ, ಬದುಕು ಹಾಗೂ ಇತರ ಲೇಖಕ, ಲೇಖಕಿಯರ ಕೃತಿಗಳೇ ಗುರುಗಳು. ಕನ್ನಡದ ಅಥವಾ ಇತರ ಭಾರತೀಯ ಭಾಷೆಗಳ ಅಥವಾ ಜಗತ್ತಿನ ಕತೆಗಾರ, ಕತೆಗಾರ್ತಿಯರನ್ನು ಹಾಗೂ ವಿಭಿನ್ನ ಪ್ರಕಾರಗಳ ಪುಸ್ತಕಗಳನ್ನು ನಾನು ಓದುತ್ತಿರುತ್ತೇನೆ. ಕತೆ ಬರೆಯುವ ವ್ಯಕ್ತಿಗೆ ಕೇವಲ ಇತರರ ಕತೆಗಳೇ ಮಾರ್ಗದರ್ಶನ ಮಾಡುತ್ತವೆಂದೇನಿಲ್ಲ; ನಾಟಕ, ಕಾವ್ಯದಂಥ ಇತರ ಪ್ರಕಾರಗಳು; ಸ್ತ್ರೀವಾದ, ಮಾರ್ಕ್ಸ್‌ವಾದ, ಲೋಹಿಯಾವಾದದಂಥ ಚಿಂತನೆಗಳು... ಇವೆಲ್ಲವೂ ಕಥಾ ಬರವಣಿಗೆಯ ಹಿನ್ನೆಲೆಯಲ್ಲಿದ್ದು ಪ್ರೇರಣೆ ನೀಡುತ್ತಿರುತ್ತವೆ. ಮುಸ್ಲಿಂ ಲೋಕದ ದುಗುಡಗಳನ್ನು, ಸೂಕ್ಷ್ಮಗಳನ್ನು ಪ್ರೇಮಚಂದ್ ಅಥವಾ ಇಸ್ಮತ್ ಚುಗ್ತಾಯಿಯವರ ಕತೆಗಳು ನನಗೆ ಹೇಳಿಕೊಟ್ಟಂತೆಯೇ, ಒಂದು ಕತೆಯ ಪಾತ್ರಗಳ ಜಾತಿಮೂಲ ವರ್ತನೆಗಳನ್ನು ಅರಿಯಲು ಅಂಬೇಡ್ಕರ್‌ವಾದ, ಲೋಹಿಯಾವಾದಗಳೂ ನೆರವಾಗುತ್ತಿರಬಹುದು. ಔದಾರ್ಯದ ಮಾನವೀಯ ಪಾತ್ರಗಳನ್ನು ಸೃಷ್ಟಿಸಲು ಗಾಂಧೀವಾದವೂ ನೆರವಾಗುತ್ತಿರಬಹುದು. ಇವೆಲ್ಲ ನಾವು ಉಸಿರಾಡುವ ಗಾಳಿಯಂತೆ ನಮಗರಿವಿಲ್ಲದೆಯೇ ನಮ್ಮ ಕಥಾಬರವಣಿಗೆಗೆ ಒದಗಿ ಬರುತ್ತಿರುತ್ತವೆ; ಆದರೆ ಕತೆಯೊಂದರಲ್ಲಿ ಇವೆಲ್ಲವೂ ಕಂಡೂ ಕಾಣದಂತೆ ಬೆರೆಯದೆ, ಕೇವಲ 'ವಾದ'ಗಳಂತೆ ವರ್ತಿಸತೊಡಗಿದರೆ ಕತೆಗೆ ಹೊಡೆತ ಬೀಳುತ್ತದೆ.

ಅನೇಕ ಸಲ ನಾವು ಸಣ್ಣಪುಟ್ಟ ವಿವರಗಳಿಂದಲೂ ಕಲಿಯುತ್ತಿರುತ್ತೇವೆ. ಮಾರ್ಕ್ವೆಝ್, 'ಒಂದು ಬೆಕ್ಕು ಮೂಲೆಯಲ್ಲಿ ಹೇಗೆ ತಿರುಗುತ್ತದೆಂಬುದರ ಸ್ವಾರಸ್ಯವನ್ನು ಗ್ರಹಿಸುವ ರೀತಿಯನ್ನು ಹೆಮಿಂಗ್ವೇಯಿಂದ ಕಲಿಯಬೇಕು' ಅನ್ನುತ್ತಾನೆ. ಕ್ಯಾಥರಿನ್ ಆ್ಯನ್ ಪೋರ್ಟರ್ ಬರೆದ ಕತೆಯೊಂದರಲ್ಲಿ ಹೆಂಗಸೊಬ್ಬಳು ಸಂತೆಯಲ್ಲಿ ಮಾರಲು ಹೊರಟ ಕೋಳಿಯ ಕಣ್ಣಿನ ವರ್ಣನೆ ಕಂಡಾಗ ಕತೆಯೊಂದರಲ್ಲಿ ಅಂಥ ಸಣ್ಣಪುಟ್ಟ ವಿವರಗಳ ಮಹತ್ವ ನನಗೆ ಅರಿವಾಗಿದೆ. ಆಫ್ರಿಕಾದ ಚಿನುವ ಅಚಿಬೆ, ಅಲೀಫಾ ರಿಫಾತ್, ಲಂಕೇಶರ ಗದ್ಯದ ಸೀಳಬಲ್ಲ ತೀವ್ರತೆ, ದೇವನೂರರ ವ್ಯವಧಾನ, ಅನಂತಮೂರ್ತಿಯವರ ಕಥನದಲ್ಲಿ ವೈಚಾರಿಕತೆಯ ಮಿಶ್ರಣ, ತೇಜಸ್ವಿಯವರ ಲಘು ಅನುಕರಣೆ... ಹೀಗೆ ಹತ್ತಾರು ಲೇಖಕ, ಲೇಖಕಿಯರಿಂದ ನಾನು ದಿನನಿತ್ಯ ಕಲಿಯುತ್ತಿರುತ್ತೇನೆ...

● ನಿಮ್ಮ ಆಪ್ತರ ಸಲಹೆ, ವಿಮರ್ಶೆ ನಿಮ್ಮ ಕಥಾಬರವಣಿಗೆಗೆ ಹೇಗೆ ನೆರವಾಗಿದೆ?

ಸಾಮಾನ್ಯವಾಗಿ ಒಂದು ಕತೆ ಪ್ರಕಟವಾಗುವ ಮೊದಲು ಅದನ್ನು ಯಾರಿಗಾದರೂ ಓದಲು ಕೊಡಬೇಕೆಂಬ ಕಾತರ ನನ್ನಲ್ಲಿ ತೀರ ಕಡಿಮೆ. ಒಂದು ಕತೆ ತಂತಾನೇ ಮುಗಿದು, ಮರು ಬರವಣಿಗೆ